ರುತ್ತಾರೆ. ಈ ಪ್ರಕರಣವು ನ್ಯಾಯಾಲಯದಲ್ಲಿ ಇನ್ನೂ ಇತ್ಯರ್ಥವಾಗಿರುವುದಿಲ್ಲ.

ಪರಿಶಿಷ್ಟ ಜಾತಿ ಉಪಯೋಜನೆ ಹಾಗೂ ಗಿರಿಜನ ಉಪಯೋಜನೆ ಅಡಿ ಬಿಡುಗಡೆಯಾದ ಅನುದಾನ

887 (402) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ವಿಶೇಷ ಘಟಕ ಯೋಜನೆಯಡಿಯಲ್ಲಿ ಮಂಜೂರಾದ ಅನುದಾನವೆಷ್ಟು?

ಆ) ಪ್ರತಿ ವರ್ಷ ಬಿಡುಗಡೆಯಾದ ಅನುದಾನವೆಷ್ಟು?

ಇ) ಈ ಯೋಜನೆಯಡಿಯಲ್ಲಿ ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಂಡ ಕಾರ್ಯಕ್ರಮಗಳು ಯಾವುವು? ಗುರಿ ಎಷ್ಟು? ಸಾಧಿಸಿದ ಪ್ರಮಾಣ, ಬಾಕಿ ಉಳಿದವು ಯಾವುವು (ಪೂರ್ಣ ವಿವರ ನೀಡುವುದು)?

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಆ ಸಂಬಂಧದ ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ವರ್ಷ	ಮಂಜೂರಾದ ಅನುದಾನ	
	ಪರಿಶಿಷ್ಟ ವರ್ಗ	ಪರಿಶಿಷ್ಟ ಜಾತಿ
2007–08	5.90	6.27
2008–09	15.28	8.56
2009–10	18.90	10.37

ಆ) ಆ ಸಂಬಂಧದ ವಿವರ ಈ ಕೆಳಗಿನಂತಿದೆ.

ವರ್ಷ	(ರೂ. ಲಕ್ಷಗಳಲ್ಲಿ)	
	ಪರಿಶಿಷ್ಟ ವರ್ಗ	ಪರಿಶಿಷ್ಟ ಜಾತಿ
2007–08	5.90	6.27
2008–09	15.28	8.56
2009–10	18.90	10.37

ಇ) ಉಲ್ಲೇಖಿತ ಯೋಜನೆಯಡಿ ಮೂಲಭೂತ ಸೌಕರ್ಯವಲ್ಲದೆ ವೈಯಕ್ತಿಕ ಸೌಲಭ್ಯ ಒದಗಿಸಿದ್ದು, ಸಬಂಧಪಟ್ಟ ವಿವರ ಈ ಕೆಳಗಿನಂತಿದೆ.

ಕಾರ್ಯಕ್ರಮ	ಗುರಿ		ಸಾಧನೆ	
	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ
ಮೂಲಭೂತ ಸೌಲಭ್ಯ (ರಸ್ತೆ ಅಭಿವೃದ್ಧಿ/ ಕುಡಿಯುವ ನೀರು) ಕಾಮಗಾರಿಗಳು	22	8	22	8
ವೈಯಕ್ತಿಕ ಆರ್ಥಿಕ ಸೌಲಭ್ಯಗಳು	167	187	167	187

ಯಾವುದೇ ಬಾಕಿ ಇರುವುದಿಲ್ಲ.

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಸಿಬ್ಬಂದಿ ಖಾಯಂಗೊಳಿಸುವುದು.

888 (403) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ;

ಆ) ರಾಜ್ಯದಲ್ಲಿ ಹೊರಗುತ್ತಿಗೆಯವರಿಂದ ನೇಮಕಗೊಂಡ ಶಿಕ್ಷಕರಿಗೆ ಸರ್ಕಾರ ನೀಡುವ ಸಂಬಳದಲ್ಲಿ ಕಡಿತಗೊಳಿಸಿ ಕೇವಲ ರೂ.3000–4000 ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹೊರಗುತ್ತಿಗೆದಾರರು ಈ ಶಾಲೆಗಳಿಗೆ ನೇಮಕಾತಿ ಮಾಡಿಕೊಳ್ಳುವಾಗ ಮೀಸಲಾತಿ ಪದ್ಧತಿಯನ್ನು ಅನುಸರಿಸುವಂತೆ ಸರ್ಕಾರ ಸೂಚನೆ ನೀಡಿದೆಯೇ? ಮೀಸಲಾತಿಯನ್ನು ಅನುಷ್ಠಾನಗೊಳಿಸಲಾಗಿದೆಯೇ? (ವಿವರ ನೀಡುವುದು)?